ತಿದ್ದಿತೀಡಿದಂತೆ ಹೇಳಿ ಕಸ್ತೂರ್ ಅಳಲು ತೊಡಗಿದಳು.

"ಕಸ್ತೂರ್, ದಯವಿಟ್ಟು ಅರ್ಥ ಮಾಡಿಕೋ... ನಾನು..."

"ಸಾಕು, ನೀವು ಮಾತನಾಡಬೇಡಿ. ಅರ್ಥ ಮಾಡಿಕೊಳ್ಳುವುದು ಎಂದರೆ ನಿಮಗೆ ಏನು ಎಂದು ಗೊತ್ತೆ? ನಿಮ್ಮ ಸುತ್ತ ಹೆಣ್ಣುಗಳು, ಹೆಣ್ಣುಗಳು, ಹೆಣ್ಣುಗಳು. ಅದೂ ಸರಳಾದೇವಿ ಚೌಧರಾಣಿಗೆ ನೀವು 'ಆಧ್ಯಾತ್ಮಿಕ ಗಂಡ' ಬೇರೆ."

"ಓ, ಇದನ್ನೇ ನಿನ್ನ ಧರ್ಮಪತ್ನಿಯ ಸ್ಥಾನಕ್ಕೆ ಬಂದ ಎರಡನೆಯ ಪರೀಕ್ಷೆ ಎಂದು ಹೇಳಿದೆಯಾ?"

"ಹೌದು... ಹೌದು."

